JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಮೇದ ಬುಡಕಟ್ಟಿನ ವೃತ್ತಿ ಮತ್ತು ಆಧುನಿಕತೆಯ ಪ್ರಭಾವ

**(ಚಿತ್ರದುರ್ಗ ತಾಲೂಕನ್ನು ಅನುಲಕ್ಷಿಸಿ)**

ರಾಜಣ್ಣ ಜಿ ಟಿ
ಸಂಶೋಧನಾರ್ಥಿ
ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ

**ಪ್ರಸ್ತಾವನೆ**

ಹಲವು ಬುಡಕಟ್ಟುಗಳಲ್ಲಿ ಮೇದ ಬುಡಕಟ್ಟು ಸಹ ಒಂದು ಪ್ರಮುಖ ಬುಡಕಟ್ಟು ಆಗಿದೆ. ಹಿಂದೆ ಇವರು ಕಾಡುಗಳಲ್ಲಿ ಹೆಚ್ಚಾಗಿ ವಾಸ ಮಾಡುತ್ತಿದ್ದರು. ಅದರಲ್ಲಿ ಮುಖ್ಯವಾಗಿ ಎಲ್ಲಿ ಬಿದಿರು ಹೆಚ್ಚಾಗಿ ಬೆಳೆಯುತ್ತೊ ಅಂತಹ ಕಾಡುಗಳನ್ನು ತನ್ನ ವಾಸಸ್ಥಳಗಳನ್ನಾಗಿ ಮಾಡಿಕೊಳ್ಳುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಅರಣ್ಯ ಕಾಯ್ದೆಗಳು ಜಾರಿಗೆ ಬಂದಿರುವುದರಿಂದ ಕಾಡುಗಳನ್ನು ತೊರೆದು ಅನಿವಾರ್ಯವಾಗಿ ನಗರ ಪಟ್ಟಣಗಳಲ್ಲಿ ವಾಸ ಮಾಡಬೇಕಾದ ಪರಿಸ್ಥಿತಿ ಬಂದಿದೆ. ಅವರಿಗೆ ಅನೇಕ ರೀತಿಯ ಸವಾಲುಗಳು ಸಹ ಎದುರಾಗಿವೆ. ಅವುಗಳಲ್ಲಿ ಮುಖ್ಯವಾಗಿ ತನ್ನ ಪಾರಂಪರಿಕ ವೃತ್ತಿಯ ಮೇಲೆ ಆಧುನಿಕರಣ ಪ್ರಭಾವ ಬೀರಿದೆ ಮತ್ತು ವೃತ್ತಿಗೆ ಬೇಕಾದ ಸಲಕರಣೆಗಳ ಕೊರತೆ ಎದುರಾಗಿದೆ. ಬಿದಿರಿನಿಂದ ತಯಾರಿಸಿದ ಸಲಕರಣೆಗಳನ್ನು ಕೊಳ್ಳುವವರ ಸಂಖ್ಯೆಯೇ ತುಂಬಾ ಕಡಿಮೆಯಾಗಿದೆ. ಎಲ್ಲರೂ ಆಧುನಿಕತೆಯ ಕಡೆಗೆ ಮುಖ ಮಾಡಿದ್ದಾರೆ. ಅಂದರೆ ಪ್ಲಾಸ್ಟಿಕ್ ರಬ್ಬರ್ ಇನ್ನು ಮುಂತಾದ ವಸ್ತುಗಳಿಂದ ತಯಾರಿಸಿದ ಸಲಕರಣೆಗಳನ್ನು ಹೆಚ್ಚು ಕೊಳ್ಳುತ್ತಿದ್ದಾರೆ. ಆದ್ದರಿಂದ ಬಿದರಿಗೆ ಮಹತ್ವ ಇಲ್ಲದಂತಾಗಿದೆ. ಬಿದಿರನ್ನು ನಂಬಿಕೊಂಡು ಜೀವನ ನಡೆಸುವವರಿಗೆ ದೊಡ್ಡ ಪೆಟ್ಟು ಬಿದ್ದಿದೆ. ಸುಮಾರು ೩೫ ರಿಂದ ೪೦ ವರ್ಷಗಳಿಗೊಮ್ಮೆ ಬರುವ ಬಿದುರಿನ ಕಟ್ಟೆ ರೋಗ ಇಡೀ ಬಿದಿರು ಕಾಡನ್ನೇ ಸಾಂಕ್ರಾಮಿಕವಾಗಿ ಆಕ್ರಮಿಸಿಕೊಂಡು ಬಿದಿರು ಮೆಳೆಗಳನ್ನು ಸಂಪೂರ್ಣವಾಗಿ ಒಣಗಿಸಿ ಬಿಡುತ್ತದೆ. ಬಿದರಿನ ಪುನರುತ್ಪಾದನೆಗೆ ಕನಿಷ್ಠ ೧೦ ರಿಂದ ೧೨ ವರ್ಷಗಳು ಬೇಕು. ಈ ರೀತಿಯಾದಾಗ ಮೊದಲೇ ದಾರಿದ್ರ್ಯ ಸ್ಥಿತಿಯಲ್ಲಿರುವ ಮೇದರ ಸ್ಥಿತಿ ಮತ್ತಷ್ಟು ಅದೋಗತಿ ಸ್ಥಿತಿಗೆ ತಲುಪುತ್ತದೆ.

**ಅಧ್ಯಯನದ ಉದ್ದೇಶಗಳು**

೧. ಮೇದ ಬುಡಕಟ್ಟಿನ ವೃತ್ತಿಯ ಹಿನ್ನೆಲೆ ತಿಳಿಯುವುದು

೨. ವೃತ್ತಿಯ ಮೇಲೆ ಆಧುನಿಕತೆಯ ಪ್ರಭಾವವನ್ನು ತಿಳಿಯುವುದು

**ಮೇದ ಬುಡಕಟ್ಟಿನ ವೃತ್ತಿ**

ಪ್ರಪಂಚದಲ್ಲಿ ಹುಟ್ಟಿದ ಪ್ರತಿಯೊಬ್ಬ ಮನುಷ್ಯನು ಸಹ ತನ್ನ ಜೀವನೋಪಾಯಕ್ಕೆ ಯಾವುದಾದರೂ ಒಂದು ವೃತ್ತಿಯನ್ನು ಅನುಸರಿಸಿರುತ್ತಾನೆ. ಅದರಲ್ಲಿ ಮೇದರು ಬಿದರಿನಿಂದ ಪರಿಕರಗಳನ್ನು ತಯಾರಿಸುವ ವೃತ್ತಿ ಮಾಡುತ್ತಾರೆ. ಇದು ಅವರ ಪಾರಂಪರಿಕ ವೃತ್ತಿಯೂ ಸಹ ಆಗಿದೆ. ಈ ವೃತ್ತಿಯನ್ನು ಮಾಡಲು ಕೆಲವು ವಸ್ತುಗಳು ಮುಖ್ಯವಾಗಿರಬೇಕು.

**ವೃತ್ತಿಯಲ್ಲಿ ಬಳಸುವ ವಸ್ತುಗಳು**

**ಕತ್ತಿ:** ಬಿದಿರು ಮತ್ತು ಬೊಂಬುಗಳನ್ನು ಸೀಳಲು ಬಳಸುತ್ತಾರೆ.

**ಕೊರಡ:** ಬೊಂಬು ಮತ್ತು ಬಿದಿರನ್ನು ಕಡಿಯಲು ಆಸರೆಯಾಗಿ ಬಳಸುತ್ತಾರೆ.

**ಒಂಬು:** ವಸ್ತುವಿನ ದಿಂಡು ಕಟ್ಟಲು ಬಳಸುತ್ತಾರೆ.

**ಸೀರ್ಣ:** ಹೇಣಿ, ಮಂಚ,ಕೈವಲ್ಯ, ಬಾಗಿಲು ಇನ್ನೂ ಮುಂತಾದ ವಸ್ತುಗಳನ್ನು ತಯಾರಿಸುವಾಗ ಬಳಸುತ್ತಾರೆ.

**ದಬ್ಬಿ:** ಬಿದಿರು ಇಲ್ಲವೇ ಬಂಬು ಸೈಜಿಗೆತಕ್ಕಂತೆ ೧.೫ ಇಂಚು ಅಗಲವಿರುವಂತೆ ಸೀಳಿದ ದಪ್ಪನೆಯ ಪಟ್ಟಿಗಳು.

**ಬಾಕ:** ಬಿದಿರಿನಿಂದ ತಯಾರಿಸಿದ ೧.೫ ಅಗಲದ ಓಳಿಗಿಂತ ದಪ್ಪನಾದ ಪಟ್ಟಿಗಳು.

**ಬಳುವು:** ಬಿದಿರಿನಿಂದ ತಯಾರಿಸಿದ ನಯವಾದ ಉದ್ದನೆಯ ಕಡ್ಡಿಗಳು.

**ಆಕ:** ಬಿದಿರು ಇಲ್ಲವೇ ಬೊಂಬಿನಿಂದ ತಯಾರಿಸಿದ ೧.೫ ಇಂಚು ಅಗಲದ ಓಳಿಗಿಂತ ದಪ್ಪವಾದ ಮತ್ತು ದಬ್ಬಿಗಿಂತ ತೆಳುವಾದ ಪಟ್ಟಿಗಳು.

**ಮೇದರು ಬಿದುರಿನಿಂದ ಪರಿಕರಗಳನ್ನು ತಯಾರಿಸುವ ವಿಧಾನ**

- **ದಿಬ್ಬಣದ ಪುಟ್ಟಿ:**

ಮದುವೆಯ ಸಂದರ್ಭದಲ್ಲಿ ಮತ್ತು ಹೆಣ್ಣು ಮಕ್ಕಳು ಋತುಮತಿಯಾದ ಸಂದರ್ಭದಲ್ಲಿ ಇದನ್ನು ಬಳಸುತ್ತಾರೆ. ಇದಕ್ಕೆ ವಿಶೇಷವಾದ ಸ್ಥಾನಮಾನವಿದೆ. ಮದುವೆಯ ಮಂಟಪಕ್ಕೆ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗಲು ದಿಬ್ಬಣದ ಪುಟ್ಟಿಯನ್ನು ಬಳಸುತ್ತಾರೆ. ಇದು ಗಾತ್ರದಲ್ಲಿ ದೊಡ್ಡದಾಗಿದ್ದು ಒಳ್ಳೆಯ ಗುಣಮಟ್ಟದಾಗಿರುತ್ತದೆ.ಇದನ್ನು ತಯಾರಿಸುವಾಗ ಮೊದಲು ಬಿದರಿನಿಂದ ಆಕಗಳನ್ನು ಮಾಡಿಕೊಂಡು ತೆಳುವಾದ ಓಲುಗಳಿಂದ ತಳ ಸುತ್ತುವರು ನಂತರ ತಳಬಾಗಿಸಿಕೊಂಡು ಬಳುವಿನಿಂದ ಸುತ್ತುತ್ತಾರೆ. ಪುಟ್ಟಿಯ ಗೋಡೆಯ ಮೇಲೆ ಹೋದಂತೆ ಅಗಲವಾಗಿ ಸುತ್ತುವರು ಮೂರು ಬಳುವಿನಿಂದ ಮೂರು ಇಂಚಿನಷ್ಟು ದಿಂಡು ಸುತ್ತಿ ಆಕಗಳನ್ನು ಒಳಗೆ ಭಾಗಿಸಿ ದಿಂಡಿನಲ್ಲಿ ಸಿಕ್ಕಿಸುತ್ತಾರೆ.

- **ಮಂಚ:**

ಮಂಚವನ್ನು ಸಹ ಬೆತ್ತ ಮತ್ತು ಬಿದಿರಿನಿಂದ ತಯಾರಿಸುತ್ತಾರೆ. ಮಂಚವನ್ನು ಬಿದರಿನಿಂದ ತಯಾರಿಸುವಾಗ ಕೆಲವು ನಿಯಮಗಳನ್ನು ಪಾಲಿಸುತ್ತಾರೆ. ಬಿದಿರಿನ ಪಟ್ಟಿಗಳನ್ನು ಅಡ್ಡಲಾಗಿ ಮಂಚಕ್ಕೆ ಬಡೆಯುವುದಿಲ್ಲ ಏಕೆಂದರೆ ಸಿದಿಗೆಗೆ (ಮೃತರ ದೇಹವನು ಒತ್ತು ಸಾಗುವ ಸಾಧನ) ಮಾತ್ರ ಅಡ್ಡ ಪಟ್ಟಿಗಳನ್ನು ಹೊಡೆಯುತ್ತಾರೆ. ಮಂಚವನ್ನು ತಯಾರಿಸುವಾಗ ಮೊದಲು ಆರು ಅಡಿ ಉದ್ದದ ಎರಡು ಗಟ್ಟಿಯಾದ ಬೊಂಬುಗಳನ್ನು ತೆಗೆದುಕೊಳ್ಳುತ್ತಾರೆ. ಅದಕ್ಕೆ ೧.೫ ಗೊಂದರಂತೆ ಎರಡು ಬೊಂಬುಗಳಿಗೆ ಸಮಾನಾಂತರದಲ್ಲಿ ಐದು ರಂಧ್ರಗಳನ್ನು ಹಾಕುತ್ತಾರೆ. ಗಟ್ಟಿಯಾದ ೨-೫-೩-೫ ಅಡಿ ಅಗಲದ ಬಿದರನ್ನು ಅಡ್ಡವಾಗಿ ಹಾಕಿ ಹೇಣಿಯಂತೆ ಮಾಡುತ್ತಾರೆ. ನಂತರ ಬೊಂಬೆನಿಂದ ಹಾರೋಡಿ ಉದ್ದದ ೦.೫ ಇಂಚು ಅಗಲದ ಬಿದಿರಿನಿಂದ ದಬ್ಬೆಗಳಿಂದ ಈ ಆಕೃತಿಗೆ

ಉದ್ದಲಾಗಿ ಮಳೆಯಿಂದ ಬಡಿಯುವರು. ನಂತರ ನಾಲ್ಕು ಮೂಲೆಗಳಿಗೆ ಗಟ್ಟಿ ಬಿದಿರಿನ ಒಂದು ಪಾಯಿಂಟ್ ಐದು ಅಡಿ ಎತ್ತರದ ಕಾಲುಗಳನ್ನು ಹೊಂದಿಸಿ ಬಡಿಯುತ್ತಾರೆ.

- **ಗೊಟ್ಟ:**

ಜಾನುವಾರುಗಳಿಗೆ ಆರೋಗ್ಯದಲ್ಲಿ ಏರುಪೇರಾದಾಗ ಮಾತ್ರೆಗಳು, ಔಷಧಿಗಳನ್ನು ಹಾಕಲು ಬಳಸುತ್ತಾರೆ. ಇದು ಮುಂದೆ ಚೂಪಾಗಿದ್ದು ಹಿಂದೆ ದುಂಡಾಗಿ ಟೊಳ್ಳಾಗಿರುತ್ತದೆ. ಇದರ ಹಿಂಬಾಗದಲ್ಲಿ ಗಣ್ಣು ಬಂದಿರುತ್ತದೆ. ಅದರಲ್ಲಿ ಔಷಧಿಯನ್ನು ತುಂಬಿ ಬಾಯಿಯ ಒಳಗೆ ಹಾಕುತ್ತಾರೆ.

- **ಏಣಿ:**

ಇದನ್ನು ಎತ್ತರಕ್ಕೆ ಏರಲು ಬಳಸುತ್ತಾರೆ. ಮನೆಗಳಿಗೆ ಬಣ್ಣ-ಸುಣ್ಣಗಳನ್ನು ಬಳೆಯಲು ಮತ್ತು ಅಟ್ಟದ ಮೇಲಿನ ಸಾಮಾಗ್ರಿಗಳನ್ನು ಕೆಳಗಿಳಿಸಲು ಬಳಸುತ್ತಾರೆ. ಏಣಿಗಳು ಎತ್ತರಕ್ಕೆ ತಕ್ಕಂತೆ ಇರುತ್ತವೆ. ರ್ಂಕಾಲು, ಎಂಟ್ಕಾಲು, ಹತ್ಕಾಲು, ಹನ್ನೆರೆಡು ಕಾಲಿನ ಏಣಿ ಎಂದು ಕರೆಯುತ್ತೇವೆ.

- **ನಂದಿಯ ಕೋಲು:**

ಇದನ್ನು ಉತ್ಸವ, ಕಾರ್ತಿಕೇಶ್ವರ ಜಾತ್ರೆ ಇನ್ನೂ ಮುಂತಾದ ಹಬ್ಬ ಹರಿದಿನಗಳಲ್ಲಿ ಬಳಸುತ್ತಾರೆ. ಇದು ಎತ್ತರ ಮತ್ತು ನೇರವಾಗಿರುವ ಬಿದಿರಿನ ಕೋಲು. ಇದಕ್ಕೆ ಲೋಹದ ಗೆಜ್ಜೆಯ ಗಗ್ಗರಿಗಳನ್ನು ಹಾಕುತ್ತಾರೆ. ಮತ್ತು ಬಣ್ಣದ ಬಟ್ಟೆ ಇಲ್ಲವೇ ಹೂವಿನಿಂದ ಅಲಂಕರಿಸಿಕೊಂಡು ಕುಣಿಯುತ್ತಾರೆ.

**ಆಧುನಿಕತೆಯ ಪ್ರಭಾವ:**

ಮೇದರು ಅನೇಕ ತಲೆಮಾರುಗಳಿಂದ ತನ್ನ ಪಾರಂಪರಿಕ ವೃತ್ತಿಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಆಧುನಿಕತೆಯು ಮೇದರ ವೃತ್ತಿಯನ್ನು ಆಕರ್ಷಿಸಿಕೊಂಡಿದೆ. ೧೦-೧೫ ವರ್ಷಗಳ ಹಿಂದೆ ಬಿದಿರಿನಿಂದ ತಯಾರಿಸಿದ ವಸ್ತುಗಳ ಬಳಕೆ ಹೆಚ್ಚು ಇತ್ತು. ಆದರೆ ಈಗ ತುಂಬಾ ಕಡಿಮೆಯಾಗಿದೆ. ಹೆಚ್ಚಾಗಿ ಕೈಗಾರಿಕೆಗಳು, ಕಾರ್ಖಾನೆಗಳಿಂದ ತಯಾರಿಸಿದ ವಸ್ತುಗಳನ್ನು ಬಳಕೆ ಮಾಡುತ್ತಿದ್ದಾರೆ.

- ಬಿದಿರಿನಿಂದ ತಯಾರಿಸಿದ ವಸ್ತುಗಳಿಗೆ ಪ್ರತ್ಯೇಕ ಮಾರುಕಟ್ಟೆಗಳು ಇಲ್ಲ. ಆದರೆ ಕೈಗಾರಿಕೆಗಳಿಂದ ತಯಾರಿಸಿದ ವಸ್ತುಗಳಿಗೆ ಮಾರುಕಟ್ಟೆಗಳು ಇವೆ.
- ಬಿದಿರಿನಿಂದ ತಯಾರಿಸಿದ ವಸ್ತುಗಳ ಬೆಲೆ ಕಡಿಮೆ ಇರುತ್ತದೆ. ಪ್ಲಾಸ್ಟಿಕ್‌ನಿಂದ ತಯಾರಿಸಿದ ವಸ್ತುಗಳ ಬೆಲೆ ಜಾಸ್ತಿ ಇರುತ್ತದೆ. ಆದರೂ ಸಹ ಪ್ಲಾಸ್ಟಿಕ್‌ನಿಂದ ತಯಾರಿಸಿದ ವಸ್ತುಗಳನ್ನು ಕೊಳ್ಳಲು ಇಷ್ಟಪಡುತ್ತಾರೆ. ಯಾಕೆಂದರೆ ಪ್ಲಾಸ್ಟಿಕ್‌ನಿಂದ ತಯಾರಿಸಿದ ವಸ್ತುಗಳ ಬಣ್ಣಗಳ ಅಲಂಕಾರದಿಂದ ಕೂಡಿರುತ್ತವೆ. ಆದ್ದರಿಂದ ಜನರು ಬಣ್ಣಗಳಿಗೆ ಮರುಳಾಗುತ್ತಾರೆ.
- ಪ್ಲಾಸ್ಟಿಕ್ ಸಾಮಾನುಗಳನ್ನು ಕೊಳ್ಳುವುದು ಮತ್ತು ಬಳಕೆ ಮಾಡುವುದು ಜನರು ಒಂದು ಪ್ಯಾಷನ್ ಆಗಿ ಮಾಡಿಕೊಂಡಿದ್ದಾರೆ.
- ಕೈಗಾರಿಕೆ, ಕಾರ್ಖಾನೆಗಳಿಂದ ತಯಾರಿಸಿದ ವಸ್ತುಗಳನ್ನು ಆಕರ್ಷಿಸಲು ಜಾಹಿರಾತು, ಪ್ರಚಾರ ಕಲೆ ಇನ್ನೂ ಮುಂತಾದ ತಂತ್ರಗಳನ್ನು ಮಾಡುತ್ತಾರೆ. ಆದರೆ ಮೇದರು ತಯಾರಿಸಿದ ವಸ್ತುಗಳನ್ನು ಆಕರ್ಷಿಸಲು ಯಾವುದೇ ಜಾಹಿರಾತು, ಪ್ರಚಾರಗಳ ಬಗ್ಗೆ ತಿಳುವಳಿಕೆಯೇ ಇಲ್ಲ.
- ಪ್ಲಾಸ್ಟಿಕ್ ಬಳಕೆ ಹೆಚ್ಚಾಗಿರುವುದರಿಂದ ಬಿದಿರಿಗೆ ಮಹತ್ವ ಇಲ್ಲದಂತಾಗಿದೆ.
- ಆಧುನಿಕತೆಯ ದಿನಗಳಲ್ಲಿ ಬಿದಿರಿನ ಸಮಸ್ಯೆ ಎದುರಾಗಿದೆ.
- ಕಾಡನ್ನು ಸಂಪೂರ್ಣವಾಗಿ ಸರ್ಕಾರ ಅಧೀನಕ್ಕೆ ಒಳಪಡಿಸಿಕೊಂಡಿದೆ.

- ಬಿದಿರನ್ನು ಕೆಲವು ಪ್ರದೇಶಗಳಲ್ಲಿ ಮಾತ್ರ ಬೆಳೆಯುತ್ತಾರೆ. ಆದರೆ ಇದರ ಬಳಕೆ ನಾಡಿನಾದ್ಯಂತ ಇದೆ.
- ಕರ್ನಾಟಕದಲ್ಲಿರುವ ಬಿದಿರು ಗಟ್ಟಿಯಾಗಿರುತ್ತದೆ ಮತ್ತು ಹೆಚ್ಚು ಬಾಳಿಕೆಗೆ ಬರುತ್ತದೆ. ಆದರೆ ನಯವಾದ ಕೆಲಸಕ್ಕೆ ಬರುವುದಿಲ್ಲ ಎಂದು ಇವರು ಹೇಳುತ್ತಾರೆ. ಹೀಗಾಗಿ ಬಿದಿರನ್ನು ಹೊರ ರಾಜ್ಯಗಳಿಂದ ತರುವಾಗ ಅನೇಕ ಅಡೆತಡೆಗಳನ್ನು ಎದುರಿಸಬೇಕಾಗುತ್ತದೆ.
- ಮೇದರು ತಯಾರಿಸಿದ ವಸ್ತುಗಳನ್ನು ಮಾರಾಟ ಮಾಡುವಲ್ಲಿ ಸರ್ಕಾರ ತನ್ನದೇ ಆದ ನೀತಿ ಕಾನೂನುಗಳನ್ನು ಜಾರಿಗೊಳಿಸಿದೆ. ಇದನ್ನು ತಿಳಿಯದೇ ಮೇದರು ವಸ್ತುಗಳನ್ನು ಮಾರಾಟ ಮಾಡುವ ಸಂದರ್ಭದಲ್ಲಿ ಅಧಿಕಾರಿಗಳ ದೌರ್ಜನ್ಯಕ್ಕೆ ಹೆದರಿ ಲಂಚಗಳನ್ನು ಕೊಡುತ್ತಾರೆ.
- ಪ್ರಸ್ತುತ ದಿನಗಳಲ್ಲಿ ಕೈಗಾರಿಕೆಗಳು ಕಾರ್ಖಾನೆಗಳಿಂದ ತಯಾರಿಸಿದ ವಸ್ತುಗಳನ್ನು ಕೆಲವು ಆನ್‌ಲೈನ್ ಅಪ್ಲಿಕೇಷನ್‌ಗಳ ಮೂಲಕ ಮಾರಾಟ ಮಾಡುತ್ತಾರೆ. ಉದಾಹರಣೆಗೆ ಫ್ಲಿಪ್‌ಕಾರ್ಟ್, ಅಮೇಜಾನ್, ಜೋಮ್ಯಾಟೋ, ಸ್ವಿಗ್ಗಿ ಇನ್ನೂ ಮುಂತಾದವುಗಳು

**ಉಪಸಂಹಾರ**

ಒಟ್ಟಾರೆಯಾಗಿ ಹೇಳುವುದಾದರೆ ಮೇದರ ವೃತ್ತಿ ಮತ್ತು ಆಧುನಿಕತೆಯ ಪ್ರಭಾವವನ್ನು ಗುರುತಿಸಲಾಗಿದೆ. ಮೇದರು ಪ್ರಸ್ತುತ ದಿನಗಳಲ್ಲಿ ವೃತ್ತಿ ಮಾಡಲು ಯಾವ ವಿಧಾನವನ್ನು ಬಳಸುತ್ತಿದ್ದಾರೆ. ವೃತ್ತಿಯಲ್ಲಿ ಬಳಸುವ ವಸ್ತುಗಳು ಯಾವುವು ಮತ್ತು ಆಧುನಿಕತೆಯ ಪರಿಣಾಮವನ್ನು ಚರ್ಚಿಸಲಾಗಿದೆ.

**ಪರಾಮರ್ಶನ ಗ್ರಂಥಗಳು**


೧. ಅಂಬಳಿಕೆ ಹಿರಿಯಣ್ಣ, ೧೯೯೯, ಬುಡಕಟ್ಟು ಜನರ ಬದಲಾಗುತ್ತಿರುವ ಆರ್ಥಿಕ ಜೀವನ ಜನಪದ, ಕರ್ನಾಟಕ ಜನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೨. ಮೇತ್ರಿ ಕೆ.ಎಂ, ೨೦೦೨, ಬುಡಕಟ್ಟು ಕುಲಕಸುಬುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ಉಮೇಶ ಕೆ, ೨೦೧೧, ಕರ್ನಾಟಕದ ಮೇದ ಬುಡಕಟ್ಟಿನ ಸಮಾಜಶಾಸ್ತ್ರೀಯ ಅಧ್ಯಯನ (ಚಿಕ್ಕಮಗಳೂರು ಜಿಲ್ಲೆ ಅನುಲಕ್ಷಿಸಿ), ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ಕಡ್ಲಬಾಳ ಪನ್ನಂಗಧರ, ೨೦೦೪, ಮೇದರ ಸಂಸ್ಕೃತಿ ಮತ್ತು ವಾಣಿಜ್ಯ ಅಧ್ಯಯನ, ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫. ಪ್ರಭಾಕರ ಕೆ.ವಿ, ೨೦೧೩, ಮೇದರ ಸಮುದಾಯದವರ ಬದುಕಿಗೆ ಬೆಂಗಾವಲಾಗಿ ನಿಂತ ಬಿದಿರು, ಅಂತರ್ಜಾಲ.